ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಜೋಡಿ ಹುಲ್ಲೇನಹಳ್ಳಿ ಕೆರೆಯ ಅಂದಾಜನ್ನು ಎಷ್ಟು ದಿವಸದಿಂದ ಸರ್ಕಾರದವರು ಪರಿಶೀಲಿಸುತ್ತಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ 63,700 ರೂಪಾಯಿಗಳಿಗೆ ಅಂದಾಜಾಗಿ irrigation enquiry ನಡೆಯುತ್ತಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ರೀತಿ ಎಕ್ಸ್‌ಟೆನ್ಶಿ ಈಚೆಗೆ ಎಷ್ಟು ಸಾರಿ ಆಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ಗೊತ್ತಿಲ್ಲ, ನೋಟೀಸ್ ಬೇಕು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ವರ್ಷ ವರ್ಷವೂ ಇರಿಗೇಷನ್ ಎಕ್ಸ್‌ಟೆನ್ಶಿ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾದಷ್ಟು ಪ್ರತಿಫಲ ದೊರೆಯದೇಯಿರುವ ಸಂದರ್ಭಗಳಲ್ಲಿ ಪುನಃ ಮಾಡುವುದು ಪಾಡಿಕೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದನ್ನು ಪೂರ್ತಿಸಿ ಯಾವಾಗ ಮಂಜೂರು ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜನು ನೋಡಿ ಹೇಳಬೇಕು. ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಕೆರೆಯ ಕೆಳಗೆ ತರಿ ಕಂದಾಯವನ್ನು ಕೊಡುತ್ತಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ರೈತರಿಗೆ ನಷ್ಟವಾಗುವುದನ್ನು ತಪ್ಪಿಸುವುದಕ್ಕಾಗಿ ಆದಷ್ಟು ಜಾಗ್ರತೆ ಮಂಜೂರು ಮಾಡುತ್ತೀರಾ?

Sri Kadidal MANJAPPA.—We are taking up the restoration work in all the districts according to a programme depending upon the availability of funds. I cannot definitely straightaway say. I am not in a position to sanction the estimate now alone.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—Availability of funds ಎಂದು ಹೇಳುತ್ತೀರಿ, ಎಷ್ಟು ವರ್ಷಗಳಿಂದ ಅಂದಾಜು ತಯಾರಾಗಿ ಹಾಗೆಯೇ ನಿಂತಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಾನು ಕೇಳಿರತಕ್ಕ ಕೆರೆಗಳ ಕೆಲಸಗಳೆಲ್ಲಾ ಬಹಳ ವರ್ಷಗಳಿಂದ ನಿಂತುಹೋಗಿವೆ, ಇವುಗಳನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಲ್ಲ ಅನೇಕ ಸಂದರ್ಭಗಳಲ್ಲಿ ನಾನು ಅರಿಕೆ ಮಾಡಿಕೊಂಡಿರುವ ಹಾಗೆ, ಸಂಸ್ಥಾನದಲ್ಲಿ ನಾದುರಸ್ತಾಗಿರುವ ಕೆರೆಗಳ ಸಂಖ್ಯೆ ಹೇರಳವಾಗಿದೆ. ಸಾವಿರಾರುಕೆರೆಗಳು ದುರಸ್ತಾಗಬೇಕಾಗಿವೆ. ಎಲ್ಲವನ್ನೂ ಜಾಗ್ರತೆ ಮಾಡುವುದಕ್ಕೆ ಹಣವನ್ನೊದಗಿಸಲು ಸಾಧ್ಯವಿಲ್ಲ. ಎಲ್ಲ ಸಾಧ್ಯವೋ ಅಲ್ಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸದಸ್ಯರು ಸಾಮಾನ್ಯವಾಗಿ ಯಾವ ಕೆರೆಗೆ ಬಹಳ ಪ್ರಮುಖತೆ ಕೊಡಬೇಕೋ ಅಂಥಾದ್ದನ್ನು ಮಾತ್ರ ಕೇಳುತ್ತಾರೆ. ದುರಸ್ತಾಗಬೇಕಾಗಿರುವ ಅನೇಕ ಕೆರೆಗಳಿದ್ದರೂ ನಾವು ಗಮನಕೊಡಬೇಕೆಂದು ಕೇಳುವ ಕೆರೆಗಳ ಸಂಖ್ಯೆ ಬಹಳ ಕಡಮೆ. ಆದುದರಿಂದ ಪರಿಶೀಲನೆ ಮಾಡುತ್ತೀರಾ?

(ಉತ್ತರವಿಲ್ಲ.)

ಶ್ರೀ ಎ. ಆರ್. ನಾಯ್ಡು.—ಅಧ್ಯಕ್ಷರಲ್ಲಿ ಒಂದು ವಿನಂತಿ. ಕೆಲವು ಪ್ರಶ್ನೆಗಳ ಸಂಬಂಧವಾಗಿ, ಸಂಬಂಧಪಟ್ಟ ಅಧಿಕಾರಿಗಳಲ್ಲಿ ಹೋಗಿ ಅರ್ಜಿ ಕೊಟ್ಟರೆ ಅವರು ಕೆಲಸ ಮಾಡದೇ ಹೋದರೆ ಅವರಿಗೆ ಸಂಬಳ ನಿಲ್ಲಿಸುತ್ತೇವೆಂದು . . .

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನಾವಳಿ ಒಟ್ಟು ಒಡಗಿನತಕ್ಕ ಮೊಬಲಗಿನಲ್ಲಿ, ಹೆಚ್ಚು ಕೆಲಸವಿರುವ ಕಡೆಗೆ ಹೆಚ್ಚಾಗಿಯೂ, ಕಡಮೆ ಕೆಲಸವಿರುವ ಕಡೆಗೆ ಕಡಮೆಯಾಗಿಯೂ ಹಣ ಒದಗಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ?

ಅಧ್ಯಕ್ಷರು.—ಆ ವಿಷಯ ಇಲ್ಲಿ ಬರುವುದಿಲ್ಲ.

Feeder channel to Ranikere from Narayanapura Anecut.

Q.—239. Sri V. MASIYAPPA (Hiriyur).—

Will the Government be pleased to state :—

(*a*) whether the raiyats under Ranikere tank in Challakere taluk have been asking for a feeder channel from the Narayanapura Anecut or at a higher place from where levels would permit ;

(*b*) if so, the action taken by the Government?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Investigations have been conducted but the proposal is found not feasible.

ಶ್ರೀ ವಿ. ಮಸಿಯಪ್ಪ.—ಪ್ರಶ್ನೆಯ (ಬ) ಭಾಗಕ್ಕೆ ಉತ್ತರವಾಗಿ "investigations have been conducted but the proposal is found not feasible" ಎಂದು ಹೇಳೋಣವಾಗಿದೆ. ಇದಕ್ಕೆ ಕಾರಣ ತಿಳಿಸುತ್ತೀರಾ?

Sri Kadidal MANJAPPA.—Levels do not permit.

ಶ್ರೀ ವಿ. ಮಸಿಯಪ್ಪ.—ಲೆವಲ್ಸ್‌ನ್ನು ನಾರಾಯಣಪುರ ಅಣೆಕಟ್ಟಿನಿಂದೀಚೆಗೆ ಸಿದ್ದಲಯ್ಯನ ಕೋಚೆ ಎಂಬ ಸ್ಥಳಕ್ಕೆ ಬದಲಾವಣೆ ಮಾಡಿದೆಯಲ್ಲವೆ?

Sri Kadidal MANJAPPA.—I have no information.

ಶ್ರೀ ವಿ ಮಸಿಯಪ್ಪ.—ತಾವು ಸ್ಥಳವನ್ನು ನೋಡಿಕೊಂಡು ಬಂದಿದ್ದೀರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ನೋಡುವುದಕ್ಕೂ, ಇಂಜಿನಿಯರು ನೋಡುವುದಕ್ಕೂ, ವ್ಯತ್ಯಾಸವಿದೆ. ಆದರೂ 'ಲೆವಲ್ಸ್ ಪರ್ಮಿಟ್' ಮಾಡಬೇಕು.

Sri V. MASIYAPPA.—My question was whether there is change of place regarding the site of the anecut.

Sri Kadidal MANJAPPA.—Yes.

Sri V. MASIYAPPA.—Will the Government be pleased to state from where the investigations have been done, *i.e.*, the place from where they have taken levels ?

Sri Kadidal MANJAPPA.—The investigation was changed in the year 1953 after the site was changed.

Sri V. MASIYAPPA.—Shall I take it that it was from Siddalainakote ?

Sri Kadidal MANJAPPA.—From the new site.

Sri V. MASIYAPPA.—May I know the places or the villages through which the levels have been taken for the Ranikere ?

Sri Kadidal MANJAPPA.—I have no information. The details of investigation are not available with me.

ಶ್ರೀ ವಿ. ಮಸಿಯಪ್ಪ.—ಸಿದ್ದಲಯ್ಯನ ಕೋಟೆಯಿಂದ ಬಳಿಗೆರೆ, ಗೋಪನಹಳ್ಳಿ ಮಾರ್ಗವಾಗಿ ದೊಡ್ಡೇರಿಯ ಹತ್ತಿರ ಗರಣಿ ಹೊಳೆಗೆ ಲೀಡ್ ಮಾಡಿದರೆ, ನೀರವಾಗಿ ಕಾಲುವೆಯನ್ನು ತೋಡಿ ನೀರು ಬಿಟ್ಟರೆ ರಾಣಿ ಕೆರೆಯನ್ನು ಫೀಡ್ ಮಾಡಲು ಸಾಧ್ಯವಾಗುತ್ತದೆಂಬುದನ್ನು ಪರಿಶೀಲನೆಮಾಡುತ್ತೀರಾ ?

Sri Kadidal MANJAPPA.—That is a new proposal which is put forward. If the Hon'ble Member writes to me, we will get it investigated.

Feeder channel to Chikkamullur Tank from Suvarnamukhi River.

Q.—386. Sri Mali MARIYAPPA (Pavagada).—

Will the Government be pleased to state :—

(*a*) whether an estimate for constructing a feeder channel from "Suvarnamukhi" river to Chikkamulur tank prepared ;

(*b*) when the work will be taken up ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) After the estimate is sanctioned.

ಶ್ರೀ ಮಾಲಿ ಮರಿಯಪ್ಪ.—ಎಷ್ಟು ಮೊತ್ತಕ್ಕೆ ಅಂದಾಜು ಕಳುಹಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—2,30,000 ರೂ ಪಾಯಿಗಳಿಗೆ.

ಶ್ರೀ ಮಾಲಿ ಮರಿಯಪ್ಪ.—ಅಂದಾಜು ಸರ್ಕಾರಕ್ಕೆ ಯಾವಾಗ ಬಂತು ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಇನ್ನೂ ಬಂದಿಲ್ಲ, ಸೂಪರಿಂಟೆಂಡಿಂಗ್ ಇಜಿನಿಯರ ಬಳಿಯಲ್ಲಿದೆ.

ಶ್ರೀ ಮಾಲಿ ಮರಿಯಪ್ಪ.—ಒಂದು ಸಾರಿ ಮಾನ್ಯ ರೆವಿನ್ಯೂ ಮಂತ್ರಿಗಳು ಆ ಪ್ರದೇಶಕ್ಕೆ ಭೇಟಿ ಕೊಟ್ಟ ಕಾಲದಲ್ಲಿ, ಅದು ಕ್ಷಾಮ ಪ್ರದೇಶದಲ್ಲಿದೆಯೆಂದೂ ನಮ್ಮಾರು ಹದಿನೈದು ವರ್ಷಗಳಿಂದಲೂ ಕೇಳುತ್ತಿದ್ದಾರೆಂದು ರೈತರು ಹೇಳಿದುದು ನೆನಪಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ರೈತರೂ ಹೇಳಿದ್ದಾರೆ, ತಾವೂ ಹೇಳಿದ್ದೀರಿ.

ಶ್ರೀ ಮಾಲಿ ಮರಿಯಪ್ಪ.—ಆದಷ್ಟು ಜಾಗ್ರತೆ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದರಿಂದ ಬರತಕ್ಕ ಪ್ರತಿಫಲ ಬಹಳ ಕಡಮೆಯೆಂದು ನನಗೆ ವರದಿ ಬಂದಿದೆ, ಆದರೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಮಾಲಿ ಮರಿಯಪ್ಪ.—ಸೂಪರಿಂಟೆಂಡಿಂಗ್ ಇಂಜಿನಿಯರಿಂದ ಮುಂಗಡವಾಗಿ ನಿಮಗೆ ವರದಿ ಹೇಗೆ ಬಂತು ?

ಶ್ರೀ ಕಡಿದಾಳ್ ಮಂಜಪ್ಪ.—ಈ ಪ್ರಶ್ನೆಯ ಸಂಬಂಧವಾಗಿ ವಿವರಗಳನ್ನು ತರಿಸಿದೆ.

Feeder Channel to Bukkapatna Tank.

Q.—474. Sri B. C. NANJUNDAIYA (Kora).—

Will the Government be pleased to state :—

(*a*) the amount that was sanctioned for constructing a feeder channel to the Bukkapatna tank of Bukkapatna hobli, Sira taluk ;

(*b*) when this work was commenced;

(*c*) whether the amount sanctioned has been completely spent ;

(*d*) whether this work has been completed or remaining half completed;

(*e*) if not completed, the reason therefor ; when it will be completed ?

A.—Sri Kadidal MANJAPPA (Minister for Revenue and Public Works).—

(*a*) Rs. 1,16,500.

(*b*) In 1953.

(*c*) Yes.

(*d*) Not yet completed.

(*e*) Additional funds are required for completing the work. The revised estimate for the work is under scrutiny. The balance work will be completed after the revised estimate is sanctioned.